**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶಿಕಾರಿಪುರ.**

**ಸಿಸಿ ನಂ.** 759/2021

| | | |
|---|---|---|
| ಸಾಕ್ಷಿದಾರರ ಹೆಸರು | ಸುಧಾಕರ್ | ಪಿಡಬ್ಲ್ಯು – 1 |
| ತಂದೆ ಹೆಸರು | ಸದಾನಂದ ನಾಯ್ಡು | ಸಿಡಬ್ಲ್ಯು – 1 |
| ವಯಸ್ಸು | 56 | |
| ಉದ್ಯೋಗ | ಹೆಚ್ಚುವರಿ ಎಸ್.ಪಿ | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಉಡುಪಿ | 01.09.2025 |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆ ಸಸಅ ರವರಿಂದಃ–</u>**

1. ನಾನು ಜುಲೈ 2016 ರಿಂದ ಸೆಪ್ಟಂಬರ್ 2019 ರವರೆಗೆ ಶಿಕಾರಿಪುರದಲ್ಲಿ ಡಿವೈಎಸ್ಪಿ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 20.06.2017 ರಂದು ಮಧ್ಯಾಹ್ನ 12.45 ಗಂಟೆಯಲ್ಲಿ ನಾನು ನನ್ನ ಕಚೇರಿಯಲ್ಲಿದ್ದಾಗ ಬೆಂಡೆಕಟ್ಟೆ ಬಸ್ ಸ್ಟಾಂಡ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಮಾರಾಟ ಮಾಡಲು ಗಾಂಜಾ ಸಾಗಾಟ ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ ನಾನು ಶಿಕಾರಿಪುರ ಗ್ರಾಮಾಂತರ ಪೋಲೀಸ್ ಠಾಣೆಯ ಪಿಎಸ್ಐ ಮತ್ತು ಸಿಬ್ಬಂದಿಯನ್ನು ಕರೆಸಿ ಅವರಿಗೆ ವಿಚಾರ ತಿಳಿಸಿ, ನಂತರ ಸಿಬ್ಬಂದಿಗಳ ಮೂಲಕ ಚಾಸಾ – 2 ಮತ್ತು 3 ರವರನ್ನು ಪಂಚರನ್ನಾಗಿ ಕರೆಸಿ ಅವರಿಗೆ ನೋಟೀಸ್ ನೀಡಿ ದಾಳಿ ಮಾಡುವ ಸಮಯದಲ್ಲಿ ಅವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ನಾನು, ಚಾಸಾ – 2 ರಿಂದ 13 ಮತ್ತು 16 ರವರೊಂದಿಗೆ ಎರಡು ಇಲಾಖಾ ವಾಹನಗಳಲ್ಲಿ ಹೊರಟು ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಬೆಂಡೆಕಟ್ಟೆ ಬಸ್ ನಿಲ್ದಾಣದ ಎದುರುಗಡೆ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ಪ್ಲಾಸ್ಟಿಕ್ ಚೀಲ ಹಿಡಿದು ನಿಂತಿದ್ದು, ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ನಾನು ಹಾಗೂ ನಮ್ಮ ಸಿಬ್ಬಂದಿ ಸುತ್ತುವರೆದು ಆತನನ್ನು ಹಿಡಿದು, ಪರಿಶೀಲಿಸಲಾಗಿ ಆತನ

ಬಳಿ ಪ್ಲಾಸ್ಟಿಕ್ ಚೀಲದಲ್ಲಿ ಸೀರೆಯ ಒಂದು ಗಂಟು ಇದ್ದು, ಅದನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಒಣಗಿದ ಗಾಂಜಾ ಗಿಡದ ಎಲೆಗಳ ಸೊಪ್ಪು, ಗಾಂಜಾ, ಬೀಜ, ಕಾಂಡ, ಹೂವು ಎಲ್ಲಾ ಇದ್ದು, ಆತನ ಹೆಸರು ವಿಚಾರಿಸಲಾಗಿ ಆತ ಸುರೇಶ್ ಎಂದು ತಿಳಿಸಿದ್ದು, ಅವುಗಳನ್ನು ಎಲ್ಲಿಂದ ತಂದಿದ್ದೀಯಾ ಎಂದು ಕೇಳಲಾಗಿ ತನ್ನ ಹೊಲದಲ್ಲಿ ಬೆಳೆಸಿರುವುದಾಗಿ ತಿಳಿಸಿದ್ದು, ಅದನ್ನು ಮಾರಾಟ ಮಾಡಲು ಹೊನ್ನಾಳಿಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ.

3. ನಂತರ ನಾವು ಆತನನ್ನು ನಮ್ಮ ವಶಕ್ಕೆ ಪಡೆದು ಸಿಬ್ಬಂದಿಗಳ ಮೂಲಕ ತೂಕದ ಯಂತ್ರ ತರಿಸಿ ತೂಕ ಮಾಡಿ ನೋಡಲಾಗಿ ಅದು ಒಟ್ಟು 550 ಗ್ರಾಂ ತೂಕ ಇದ್ದು, ಅದರ ಅಂದಾಜು ಮೊತ್ತ 5,500/- ಎಂದು ಪಂಚರು ನಿರ್ಧಾರ ಮಾಡಿದರು. ನಂತರ ಪಂಚರ ಸಮಕ್ಷಮ ಅದನ್ನು ಬಿಳಿಯ ಬಟ್ಟೆಯಲ್ಲಿ ಸುತ್ತಿ, ಅದಕ್ಕೆ ಪಂಚರ ಮತ್ತು ನಮ್ಮ ಸಹಿ ಇರುವ ಚೀಟಿ ಅಂಟಿಸಿ ಅದಕ್ಕೆ ಎಸ್ ಎಂಬ ಹೆಸರಿನಿಂದ ಸೀಲ್ ಹಾಕಿ ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಆ ದಿನ ಮಧ್ಯಾಹ್ನ 2.05 ರಿಂದ 3 ಗಂಟೆವರೆಗೆ ಮಾಡಲಾಯಿತು. ಆ ಸಮಯದಲ್ಲಿ ಭಾವ ಚಿತ್ರ ತೆಗೆದಿರುತ್ತೇನೆ. ನಂತರ ಆರೋಪಿ ಮತ್ತು ಮುದ್ದೆ ಮಾಲಿನೊಂದಿಗೆ ಶಿಕಾರಿಪುರ ಗ್ರಾಮಾಂತರ ಠಾಣೆಗೆ ಬಂದು ಆರೋಪಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆರೋಪಿ, ಮಾಲು ಮತ್ತು ಮಹಜರನ್ನು ನನ್ನ ಸ್ವ ದೂರಿನೊಂದಿಗೆ ಠಾಣಾಧಿಕಾರಿಗೆ ಕೊಟ್ಟಿರುತ್ತೇನೆ.

4. ಸಾಕ್ಷಿ ಸದರಿ ಸ್ವ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ – 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ – 1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆ ದಿನ ಸ್ಥಳದಲ್ಲಿ ಅಮಾನತ್ತು ಮಾಡಿದ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗ ನಿಪಿ – 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ – 2(ಎ) ಎಂದು

ಗುರುತಿಸಲಾಯಿತು. ಆ ದಿನ ಸ್ಥಳದಲ್ಲಿ ತೆಗೆದ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ನಿಪಿ – 3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿ ಆ ದಿನ ಅಮಾನತ್ತುಪಡಿಸಿಕೊಂಡ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ – 1 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಡಿ ವಕೀಲರಿಂದಃ**

5. ಆ ದಿನ ನನಗೆ ಮಾಹಿತಿ ಬಂದಾಗ ನಾನು ಠಾಣೆಯಲ್ಲಿದ್ದೆ. ಆ ದಿನ ನಾನು ಕಚೇರಿಯಿಂದ ಮಧ್ಯಾಹ್ನ 1.45 ಕ್ಕೆ ಹೋಗಿರುತ್ತೇನೆ. ನಮ್ಮ ಠಾಣೆಯಿಂದ ಕೃತ್ಯ ಸ್ಥಳ 5–6 ಕೀ ಮೀ ಅಂತರದಲ್ಲಿದೆ. ಸಾಮಾನ್ಯವಾಗಿ ಐದಾರು ಕೀ ಮೀ ಅಂತರವನ್ನು ಐದಾರು ನಿಮಿಷದಲ್ಲಿ ಹೋಗಬಹುದು ಎಂದರೆ ಸಾಕ್ಷಿ ಅದು ವೇಗದ ಮೇಲೆ ಅವಲಂಬನೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ದಿನ ನಾವು ನಿಧಾನವಾಗಿ ಮಾಹಿತಿಯನ್ನು ಖಾತ್ರಿಪಡಿಸಿಕೊಂಡು ಹೋಗಿರುತ್ತೇವೆ.

6. ಬಳ್ಳೂರು ಗ್ರಾಮ ಶಿಕಾರಿಪುರದಿಂದ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಬಳ್ಳೂರು ಗ್ರಾಮದವರು. ಆ ದಿನ ನಮಗೆ ಮಾಹಿತಿ ಬಂದಾಗ ಆರೋಪಿ ಬಳ್ಳೂರು ಗ್ರಾಮದವರು ಎಂದು ತಿಳಿಸಿದ್ದು, ನಂತರ ಸ್ಥಳಕ್ಕೆ ಹೋದ ಮೇಲೆ ಅದು ಖಚಿತವಾಗಿರುತ್ತದೆ. ನಾನು ಆ ದಿನ ಆರೋಪಿಯ ಹೊಲದ ಸ್ಥಳಕ್ಕೆ ಹೋಗಿ ಗಾಂಜಾ ಬೆಳೆದಿರುವ ಬಗ್ಗೆ ಪರಿಶೀಲನೆ ಮಾಡಿಲ್ಲ. ಆ ದಿನ ಪಂಚರನ್ನು ನಮ್ಮ ಸಿಬ್ಬಂದಿ ಕರೆದುಕೊಂಡು ಬಂದಿರುತ್ತಾರೆ. ಆ ರೀತಿ ಅವರನ್ನು ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ಕೆಂಪು ಸೀರೆ ಸಮೇತ ಮಾಲನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಅದು ತನಿಖಾಧಿಕಾರಿಗಳಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಆ ದಿನ ಸದರಿ

ಸೀರೆ ಸಮೇತ ಮಾಲನ್ನು ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ಹೊನ್ನಾಳಿ ಇಲ್ಲಿಂದ ಸುಮಾರು 40 ಕೀ ಮೀ ಅಂತರದಲ್ಲಿದೆ. ಹೊನ್ನಾಳಿಗೆ ಬಳ್ಳೂರಿನಿಂದ ನೇರವಾಗಿ ಹೋಗಬಹುದು, ಶಿಕಾರಿಪುರಕ್ಕೆ ಬರುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿ ಅದು ಆರೋಪಿಗೆ ಬಿಟ್ಟಿದ್ದು ಎಂದು ನುಡಿಯುತ್ತಾರೆ. ನಾನು ನನ್ನ ದೂರಿನಲ್ಲಿ ಹೊನ್ನಾಳಿಗೆ ಆರೋಪಿ ಗಾಂಜಾ ಮಾರಾಟ ಮಾಡಲು ಹೋಗುತ್ತಿದ್ದ ಬಗ್ಗೆ ತಿಳಿಸಿದ್ದೇನೆ.

7. ನಾನು ಆ ದಿನ ಸ್ಥಳಕ್ಕೆ ಹೋಗಿ ಆರೋಪಿಯನ್ನು ಸುಮಾರು 25 ಮೀಟರ್ ದೂರದಿಂದ ನೋಡಿರುತ್ತೇನೆ. ಆ ದಿನ ಆರೋಪಿಯನ್ನು ನಾನೇ ಮೊದಲು ನೋಡಿರುತ್ತೇನೆ. ಆ ದಿನ ನಮ್ಮನ್ನು ನೋಡಿ ಆರೋಪಿ ಓಡಿ ಹೋಗಲು ಪ್ರಯತ್ನಪಟ್ಟ. ಆ ದಿನ ನಮ್ಮ ಸಿಬ್ಬಂದಿ ಎಲ್ಲಾ ಆರೋಪಿಯನ್ನು ಸುತ್ತುವರೆದು ಹಿಡಿದಿದ್ದು, ಯಾರು ಮೊದಲು ಹಿಡಿದುಕೊಂಡರು ಎಂದು ಹೇಳಲಾಗುವುದಿಲ್ಲ. ಆ ದಿನ ಆರೋಪಿ ಲುಂಗಿ ಮತ್ತು ಶರ್ಟ್ ಹಾಕಿದ್ದು, ಬಣ್ಣ ನೆನಪಿಲ್ಲ.

8. ಮುಮಾ – 1 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. 100 ಗ್ರಾಂ ಸ್ಯಾಂಪಲ್ ತೆಗೆದ ಗಾಂಜಾ ಈಗ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸಾಕ್ಷಿ ಈಗ ಇರುವುದು ಅದೇ ಎಂದು ನುಡಿಯುತ್ತಾರೆ. ಮುಮಾ – 1, 100 ಗ್ರಾಂ ಇರಬಹುದು, ಅದನ್ನು ನನ್ನ ಸಮಕ್ಷಮ ಸ್ಯಾಂಪಲ್ ತೆಗೆದಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಉಳಿದ ಮುದ್ದೆ ಮಾಲು ಇಲ್ಲ ಎಂದರೆ ಸರಿ. ಮುದ್ದೆ ಮಾಲನ್ನು ಆರೋಪಿ ಎಲ್ಲಿಂದ ತಂದ ಮತ್ತು ಎಲ್ಲಿ ಬೆಳೆದಿದ್ದ ಎಂಬ ಬಗ್ಗೆ ನೀವು ತಿಳಿಸಿಲ್ಲ ಎಂದರೆ ಸಾಕ್ಷಿ ದಾಳಿ ಸಮಯದಲ್ಲಿ ತನ್ನ ಹೊಲದಲ್ಲಿ ಬೆಳೆದಿರುವುದಾಗಿ ತಿಳಿಸಿದ್ದಾನೆ ಎಂದು ನುಡಿಯುತ್ತಾರೆ. ನಾವು ಯಾವುದೋ ಮುದ್ದೆ ಮಾಲನ್ನು ಈ ಕೇಸಿಗೆ ಸೇರಿಸಿ ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ ಬೆಂಡೆಕಟ್ಟೆಗೆ ಬಂದಿಲ್ಲ ಎಂದರೆ ಸರಿಯಲ್ಲ.

9. ಆ ದಿನ ಅಮಾನತ್ತುಪಡಿಸಿಕೊಂಡ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಕಚ್ಚಾ ರಸ್ತೆ, ಉತ್ತರಕ್ಕೆ ಹೊನ್ನಾಳಿ ಶಿಕಾರಿಪುರ ರಸ್ತೆ, ಪಶ್ಚಿಮಕ್ಕೆ ಕಚ್ಚಾ ರಸ್ತೆ, ದಕ್ಷಿಣಕ್ಕೆ ಬಸವಣ್ಣ ದೇವಸ್ಥಾನದ ಜಮೀನು. ನಾನು ಆ ದಿನ ಸದರಿ ಬಸವಣ್ಣ ದೇವಸ್ಥಾನದ ಜಮೀನಿನ ಸರ್ವೆ ನಂಬರ್ ತಿಳಿದುಕೊಂಡಿಲ್ಲ. ಬಸ್ ನಿಲ್ದಾಣ ಸಾರ್ವಜನಿಕ ಸ್ಥಳ ಎಂದರೆ ಸರಿ. ಸಾಮಾನ್ಯವಾಗಿ ಬಸ್ ನಿಲ್ದಾಣದಲ್ಲಿ ಸುಮಾರು ಜನ ಇರುತ್ತಾರೆ ಎಂದರೆ ಸಾಕ್ಷಿ ಆ ದಿನ ಇರಲಿಲ್ಲ ಎಂದು ನುಡಿಯುತ್ತಾರೆ. ನಾವು ಆ ದಿನ ಸ್ಥಳದಲ್ಲಿ ಮಧ್ಯಾಹ್ನ 2.05 ರಿಂದ 3 ಗಂಟೆವರೆಗೆ ಮಹಜರ್ ಮಾಡಿರುತ್ತೇವೆ. ಆ ದಿನ ಸದರಿ ಮಹಜರ್ ಗೆ ಯಾರು ಮೊದಲು ಸಹಿ ಹಾಕಿದ್ದಾರೆ ಮತ್ತು ಯಾರು ನಂತರ ಸಹಿ ಹಾಕಿದ್ದಾರೆ ಎಂದು ಈಗ ನಿಖರವಾಗಿ ಹೇಳಲು ಆಗುವುದಿಲ್ಲ, ಆ ದಿನ ಪಂಚರು ಮೊದಲು ಸಹಿ ಹಾಕಿರುತ್ತಾರೆ. ಆ ದಿನ ಪಂಚನಾಮೆಯನ್ನು ನಮ ಸಿಬ್ಬಂದಿ ಶಿವಕುಮಾರ್ ಬರೆದಿರುತ್ತಾರೆ. ಆ ದಿನ ಪಂಚನಾಮೆ ಬರೆಯಲು ಶಿವಕುಮಾರ್ ರವರಿಗೆ ಪಂಚರು ಮಾಹಿತಿ ಕೊಟ್ಟಿರುತ್ತಾರೆ. ಆ ದಿನ ನಮ್ಮ ಸಿಬ್ಬಂದಿ ಭಾವ ಚಿತ್ರ ತೆಗೆದಿದ್ದು, ಅವರ ಹೆಸರು ನೆನಪಿಲ್ಲ. ಸದರಿ ಭಾವ ಚಿತ್ರಗಳಿಗೆ ಸಂಬಂಧಿಸಿದಂತೆ ಸಿಡಿ ಮತ್ತು ನೆಗೆಟಿವ್ ನಾನು ಹಾಜರುಪಡಿಸಿಲ್ಲ. ನಿಪಿ – 3 ಮತ್ತು 4 ರ ಭಾವ ಚಿತ್ರಕ್ಕೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ – 3 ಮತ್ತು 4 ರ ಭಾವ ಚಿತ್ರ ನಾನು ಹೇಳಿದ ಸ್ಥಳಕ್ಕೆ ಸಂಬಂಧಿಸಿದ ಭಾವ ಚಿತ್ರ ಅಲ್ಲ ಎಂದರೆ ಸರಿಯಲ್ಲ.

10. ಚಾಸಾ – 2 ಮತ್ತು 3 ರವರು ನಮ್ಮ ಠಾಣೆಯ ರೆಗ್ಯೂಲರ್ ಪಂಚರು ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರು ನಾನು ಆತನ ವಿರುದ್ಧ ಸುಳ್ಳು ದೂರು ಕೊಟ್ಟು ಮುದ್ದೆ ಮಾಲನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೂ ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.